# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೨೪, ಸೆಪ್ಟೆಂಬರ್, ೨೦೨೪(ಆಶ್ವಯುಜ, ೦೨, ಶಕವರ್ಷ, ೧೯೪೬)<br>BENGALURU, TUESDAY, 24, SEPTEMBER, 2024(AASHWAYUJA , 02, SHAKAVARSHA, 1946) | ನಂ. ೪೫೦<br>No. 450 |
|---|---|---|

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 38 ಶಾಸನ 2024, ದಿನಾಂಕ: 24.09.2024**

ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ಅಧಿನಿಯಮ, 2024 ವಿಧೇಯಕ, 2024 ಇದಕ್ಕೆ 2024ರ ಸೆಪ್ಟೆಂಬರ್ ತಿಂಗಳ 23ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2024ರ ಕರ್ನಾಟಕ ಅಧಿನಿಯಮ ಸಂಖ್ಯೆ: 46 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## 2024ರ ಕರ್ನಾಟಕ ಅಧಿನಿಯಮ ಸಂಖ್ಯೆ: 46

(2024 ರ ಸೆಪ್ಟೆಂಬರ್ ತಿಂಗಳ 24ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ಅಧಿನಿಯಮ, 2024

(2024 ರ ಸೆಪ್ಟೆಂಬರ್ ತಿಂಗಳ 23ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮೋದನೆಯನ್ನು ಪಡೆಯಲಾಗಿದೆ)

ರಾಜ್ಯದಲ್ಲಿ ಕ್ಷೇಮಾಭಿವೃದ್ಧಿ ಮಂಡಳಿಯನ್ನು ರಚಿಸುವ ಮೂಲಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯರ್ತರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಮತ್ತು ಅವರ ಕ್ಷೇಮಾಭಿವೃದ್ಧಿಯನ್ನು ಉತ್ತೇಜಿಸುವ ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ರಾಜ್ಯದಲ್ಲಿ ಕ್ಷೇಮಾಭಿವೃದ್ಧಿ ಮಂಡಳಿಯನ್ನು ರಚಿಸುವ ಮೂಲಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯರ್ತರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವುದು ಮತ್ತು ಅವರ ಕ್ಷೇಮಾಭಿವೃದ್ಧಿಯನ್ನು ಉತ್ತೇಜಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಕಾಡೆಮಿ" ಎಂದರೆ ಸರ್ಕಾರವು ಸ್ಥಾಪಿಸಿದ ಕರ್ನಾಟಕ ಚಲನಚಿತ್ರ ಅಕಾಡೆಮಿ, ಕರ್ನಾಟಕ ನಾಟಕ ಅಕಾಡೆಮಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕರ್ನಾಟಕ ಜಾನಪದ ಅಕಾಡೆಮಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಕರ್ನಾಟಕ ಯಕ್ಷಗಾನ ಅಕಾಡೆಮಿ ಮತ್ತು ಕರ್ನಾಟಕ ಬಯಲಾಟ ಅಕಾಡೆಮಿ;

(ಬಿ) "ಅಪೀಲು ಪ್ರಾಧಿಕಾರ" ಎಂದರೆ ಮಂಡಳಿಯ ಸದಸ್ಯ ಕಾರ್ಯದರ್ಶಿ;

(ಸಿ) "ಮಂಡಳಿ" ಎಂದರೆ ಈ ಅಧಿನಿಯಮದ 3ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕ್ಷೇಮಾಭಿವೃದ್ಧಿ ಮಂಡಳಿ;

(ಡಿ) "ವಂತಿಗೆ" ಎಂದರೆ, ಈ ಅಧಿನಿಯಮದ 8ನೇ ಪ್ರಕರಣದ ಅಡಿಯಲ್ಲಿನ ನಿಧಿಗೆ ಸಂದಾಯವಾಗುವ ಮೊತ್ತ;

(ಇ) "ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತ" ಎಂದರೆ ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಲಾವಿದ (ನಟ, ಸಂಗೀತಗಾರ ಅಥವಾ ನೃತ್ಯಪಟುವನ್ನೂ ಒಳಗೊಂಡ) ಅಥವಾಯಾವುದೇ ಕೆಲಸ, ಕೌಶಲ್ಯಯುಕ್ತ, ಕೌಶಲ್ಯವಲ್ಲದ, ಭೌತಿಕ, ಮೇಲ್ವಿಚಾರಣಾ, ತಾಂತ್ರಿಕ, ಕಲಾತ್ಮಕ ಅಥವಾ ಅನ್ಯಥಾ ಕಾರ್ಯಗಳಲ್ಲಿ ನಿಯೋಜಿತನಾದ ಯಾರೇ ವ್ಯಕ್ತಿ ಅಥವಾಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯಪತ್ರದಲ್ಲಿನ ಅಧಿಸೂಚನೆಯ ಮೂಲಕ ಸರ್ಕಾರವು ಘೋಷಿಸಿದ ಯಾವುದೇ ಅಂಥ ಇತರ ಚಟುವಟಿಕೆಗಳಲ್ಲಿ ನಿರತನಾದ ಯಾರೇ ವ್ಯಕ್ತಿ;

(ಎಫ್) "ಸಿನಿ ಮತ್ತು ಸಾಂಸ್ಕೃತಿಕ ಚಟುವಟಿಕೆ" ಎಂದರೆ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತನು ನಿರ್ವಹಿಸುವ ಮತ್ತು ಹಾಗೆಂದು ಕಾರ್ಯಕರ್ತನು ಸದಸ್ಯನಾಗಿರುವ ಸಂಬಂಧಿತ ಅಕಾಡೆಮಿ ಅಥವಾ ಸಂಸ್ಥೆಗಳು ಅಥವಾ ಈ ಅಧಿನಿಯಮದ ಉದ್ದೇಶಗಳಿಗಾಗಿ ಸರ್ಕಾರವು ಅನುಮೋದಿಸಿದ ಅಂಥ ಇತರ ನಿಕಾಯ ಅಥವಾ ಸಂಘಗಳು ಮಾನ್ಯ ಮಾಡಿದ ಚಟುವಟಿಕೆ;

(ಜಿ) "ಉಪಕರ" ಎಂದರೆ ಈ ಅಧಿನಿಯಮದ 9ನೇ ಪ್ರಕರಣದ ಅಡಿಯಲ್ಲಿ ವಿಧಿಸಿದ ಮತ್ತು ಸಂಗ್ರಹಿಸಿದ ಯಾವುದೇ ಉಪಕರ;

(ಎಚ್) "ಕುಟುಂಬ" ಎಂದರೆ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತನ ಪತ್ನಿ ಅಥವಾ ಪತಿ, ಅಪ್ರಾಪ್ತ ಗಂಡು ಮಕ್ಕಳು ಮತ್ತು ಅವಿವಾಹಿತ ಹೆಣ್ಣು ಮಕ್ಕಳು ಹಾಗೂ ಆತನ ತಂದೆ, ತಾಯಿ ಮತ್ತು ಆತನ ಮೇಲೆ ಸಂಪೂರ್ಣವಾಗಿ ಅವಲಂಬಿತರಾದ ಮಾನಸಿಕ ಅಸ್ವಸ್ಥ ಅಥವಾ ವಿಕಲ ಚೇತನ ಅಥವಾ ವಿಧವೆ ಹೆಣ್ಣುಮಕ್ಕಳನ್ನು ಒಳಗೊಳ್ಳುವುದು;

(ಐ) "ನಿಧಿ" ಎಂದರೆ, ಈ ಅಧಿನಿಯಮದ 8ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕ್ಷೇಮಾಭಿವೃದ್ಧಿ ನಿಧಿ;

(ಜೆ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಕೆ) "ಅಧಿಸೂಚನೆ" ಎಂದರೆ, ಕರ್ನಾಟಕ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ;

(ಎಲ್) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಂ) "ನೋಂದಾಯಿತ ಕಾರ್ಮಿಕರು" ಎಂದರೆ, ಈ ಅಧಿನಿಯಮದ 7ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನೋಂದಾಯಿಸಲಾದ ಕಾರ್ಮಿಕರು;

(ಎನ್) "ವಿನಿಯಮಗಳು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಮಂಡಳಿಯ ಮೂಲಕ ರಚಿಸಲಾದ ವಿನಿಯಮಗಳು;

(ಒ) "ಸಂಬಂಧಿತ ಸಂಸ್ಥೆ" ಎಂದರೆ ಏಕಪರದೆ ಚಿತ್ರಮಂದಿರಗಳು, ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳು, ಚಿತ್ರಮಂದಿರೇತರ (ಒಟಿಟಿ), ದೂರದರ್ಶನ ವಾಹಿನಿಗಳು ಮತ್ತು ಸರ್ಕಾರವು ಕಾಲಕಾಲಕ್ಕೆಅಧಿಸೂಚಿಸಿದಂಥ ಯಾವುದೇಸಂಸ್ಥೆಗಳು;

(ಪಿ) "ನಿಯಮಗಳು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳು;

(ಕ್ಯೂ) "ಯೋಜನೆ" ಎಂದರೆ, 5ನೇ ಪ್ರಕರಣದ (ಸಿ) ಖಂಡದ ಅಡಿಯಲ್ಲಿ ರಚಿಸಲಾದ ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕ್ಷೇಮಾಭಿವೃದ್ಧಿ ನಿಧಿ ಯೋಜನೆ;

(ಆರ್) "ವಿಶಿಷ್ಟ ಗುರುತು" ಎಂದರೆ ಈ ಅಧಿನಿಯಮದ 7ನೇ ಪ್ರಕರಣದ ಅಡಿಯಲ್ಲಿ ನೋಂದಾಯಿತ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರಿಗೆ ನೀಡಲಾದ ವಿಶಿಷ್ಟ ಗುರುತಿನ ಸಂಖ್ಯೆ.

**3. ಮಂಡಳಿಯ ರಚನೆ.-** (1)ರಾಜ್ಯ ಸರ್ಕಾರವು ಈ ಅಧಿನಿಯಮದ ಅಡಿಯಲ್ಲಿ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕ್ಷೇಮಾಭಿವೃದ್ಧಿ ಮಂಡಳಿ ಎಂದು ಕರೆಯಲಾಗುವ ಒಂದು ಮಂಡಳಿಯನ್ನು ಸ್ಥಾಪಿಸತಕ್ಕದ್ದು.

(2) ಮಂಡಳಿಯ ಕೇಂದ್ರ ಸ್ಥಾನವು ಬೆಂಗಳೂರಿನಲ್ಲಿ ಇರತಕ್ಕದ್ದು.

(3) ಮಂಡಳಿಯು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಹಾಗೂ ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(4) ಮಂಡಳಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| (ಎ) | ಕಾರ್ಮಿಕ ಮಂತ್ರಿಗಳು, ಕರ್ನಾಟಕ ಸರ್ಕಾರ | ಪದನಿಮಿತ್ತ ಅಧ್ಯಕ್ಷರು |
| (ಬಿ) | ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ. | ಪದನಿಮಿತ್ತ ಉಪಾಧ್ಯಕ್ಷರು |
| (ಸಿ) | ಆಯುಕ್ತರು, ಕಾರ್ಮಿಕ ಇಲಾಖೆ | ಪದನಿಮಿತ್ತ ಸದಸ್ಯ ಕಾರ್ಯದರ್ಶಿ |
| (ಡಿ) | ರಾಜ್ಯ ಸರ್ಕಾರವು ನಾಮ ನಿರ್ದೇಶಿಸುವ ಹದಿನೇಳು ಸದಸ್ಯರು, ಅವರ ಪೈಕಿ,- | |
| | (i) ಸಿನಿ ಮತ್ತು ಸಾಂಸ್ಕೃತಿಕ ಚಟುವಟಿಕೆಯಲ್ಲಿ ತೊಡಗಿರುವ ಕಾರ್ಮಿಕರನ್ನು ಪ್ರತಿನಿಧಿಸುವ ಐವರು ಸದಸ್ಯರು, ಆ ಪೈಕಿ ಇಬ್ಬರು ಮಹಿಳಾ ಸದಸ್ಯರಿರತಕ್ಕದ್ದು. | ಸದಸ್ಯರು |
| | (ii) ಸರ್ಕಾರವು ರಚಿಸಿದ ಸಿನಿ ಮತ್ತು ಸಾಂಸ್ಕೃತಿಕ ಚಟುವಟಿಕೆಯ ಅಕಾಡೆಮಿಗಳನ್ನು ಪ್ರತಿನಿಧಿಸುವ ಏಳು ಸದಸ್ಯರು. | ಸದಸ್ಯರು |

| | | |
|---|---|---|
| | (iii) ರಾಜ್ಯ ಸರ್ಕಾರದ ಇಲಾಖೆಗಳನ್ನು ಪ್ರತಿನಿಧಿಸುವ ಐವರು ಸದಸ್ಯರು, ಅವರುಗಳ ಪೈಕಿ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರು ಶಾಶ್ವತ ಸದಸ್ಯರಾಗಿರತಕ್ಕದ್ದು. | ಪದನಿಮಿತ್ತ ಸದಸ್ಯರು |

ಪರಂತು, ಮಂಡಳಿಯ ನಾಮನಿರ್ದೇಶಿತ ಸದಸ್ಯರಲ್ಲಿ ಕನಿಷ್ಠ ಮೂರನೇ ಒಂದರಷ್ಟು ಮಹಿಳೆಯರಿರುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳತಕ್ಕದ್ದು.

(5) ಮಂಡಳಿಯ ನಾಮನಿರ್ದೇಶಿತ ಸದಸ್ಯರು ಮೂರು ವರ್ಷಗಳ ಪದಾವಧಿಯನ್ನು ಹೊಂದಿರತಕ್ಕದ್ದು:

ಪರಂತು, ಸರ್ಕಾರವು ತಾನು ಯುಕ್ತವೆಂದು ಭಾವಿಸಿದಲ್ಲಿ ಅವರ ಪದಾವಧಿಯನ್ನು ಮತ್ತೊಂದು ವರ್ಷಕ್ಕೆ ವಿಸ್ತರಿಸಬಹುದು.

(6) ಮರಣ, ರಾಜೀನಾಮೆ, ಅನರ್ಹತೆ ಅಥವಾ (8)ನೇ ಉಪಪ್ರಕರಣದಡಿಯಲ್ಲಿ ತೆಗೆದು ಹಾಕುವುದರಿಂದಾಗಿ ಉದ್ಭವಿಸುವ ಯಾವುದೇ ಖಾಲಿಸ್ಥಾನಕ್ಕೆ ಸಂಬಂಧಿಸಿದಂತೆ, ಉಳಿದ ಪದಾವಧಿಗಾಗಿ ಸರ್ಕಾರವು ಹೊಸದಾಗಿ ನಾಮನಿರ್ದೇಶನ ಮಾಡುವ ಮೂಲಕ ಅಂಥ ಖಾಲಿಸ್ಥಾನವನ್ನು ತುಂಬತಕ್ಕದ್ದು.

(7) ಮಂಡಳಿಯ ಯಾರೇ ನಾಮನಿರ್ದೇಶಿತ ಸದಸ್ಯನು ಯಾವುದೇ ಸಮಯದಲ್ಲಿ ಆತನ ಹಸ್ತಾಕ್ಷರವುಳ್ಳ ಲಿಖಿತ ಪತ್ರವನ್ನು ಅಧ್ಯಕ್ಷರಿಗೆ ನೀಡುವ ಮೂಲಕ ತನ್ನ ಹುದ್ದೆಗೆ ರಾಜೀನಾಮೆಯನ್ನು ನೀಡಬಹುದು, ಮತ್ತು ರಾಜೀನಾಮೆಯ ಅಂಗೀಕಾರವಾದ ತರುವಾಯ ಆತನ ಹುದ್ದೆಯು ತೆರವಾಗತಕ್ಕದ್ದು.

(8) ಈ ಮುಂದಿನ ಯಾರೇ ವ್ಯಕ್ತಿಯನ್ನು ಮಂಡಳಿಯ ನಾಮನಿರ್ದೇಶಿತ ಸದಸ್ಯನಾಗಿ ಆಯ್ಕೆ ಮಾಡತಕ್ಕದ್ದಲ್ಲ ಅಥವಾ ಮುಂದುವರೆಸತಕ್ಕದ್ದಲ್ಲ,-

(i) ಮಂಡಳಿಯ ವೇತನ ಪಡೆಯುವ ಅಧಿಕಾರಿ ಅಥವಾ ನೌಕರನಾಗಿದ್ದರೆ; ಅಥವಾ

(ii) ಅವಿಮುಕ್ತ ದಿವಾಳಿಯಾಗಿದ್ದರೆ ಅಥವಾ ಯಾವುದೇ ಸಮಯದಲ್ಲಿ ಹಾಗೆಂದು ನ್ಯಾಯ ನಿರ್ಣೀತನಾಗಿದ್ದರೆ; ಅಥವಾ

(iii) ಮತಿ ವಿಕಲನಾಗಿದ್ದರೆ ಅಥವಾ ಅಸ್ವಸ್ಥ ಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯದಿಂದ ಹಾಗೆ ಘೋಷಿತನಾಗಿದ್ದರೆ; ಅಥವಾ

(iv) ನೈತಿಕ ಅಧ:ಪತನವನ್ನು ಒಳಗೊಂಡ ಯಾವುದೇ ಅಪರಾಧದಲ್ಲಿ ಅಪರಾಧ ನಿರ್ಣಿತನಾಗಿದ್ದರೆ; ಅಥವಾ

(v) ಮಂಡಳಿಯ ಮೂರಕ್ಕಿಂತ ಹೆಚ್ಚಿನ ನಿರಂತರ ಸಭೆಗಳಿಗೆ ಮಂಡಳಿಯ ಅನುಮತಿಯಿಲ್ಲದೆ ಗೈರು ಹಾಜರಾಗಿದ್ದರೆ.

(9) ಮಂಡಳಿಯ ನಾಮನಿರ್ದೇಶಿತ ಸದಸ್ಯರು ಮಂಡಳಿಯ ಸಭೆಗಳಿಗೆ ಹಾಜರಾಗುವುದಕ್ಕಾಗಿ ನಿಯಮಿಸಬಹುದಾದಂಥ ದರಗಳಲ್ಲಿ ಭತ್ಯೆಗಳನ್ನು ಪಡೆಯಲು ಅರ್ಹರಾಗಿರತಕ್ಕದ್ದು.

**4. ಮಂಡಳಿಯ ಸಭೆ.-** (1) ಮಂಡಳಿಯು ನಿಯಮಿಸಬಹುದಾದಂಥ ಸಮಯ ಮತ್ತು ಸ್ಥಳಗಳಲ್ಲಿ ಸಭೆಯನ್ನು ಸೇರತಕ್ಕದ್ದು ಹಾಗೂ ಕಾರ್ಯಕಲಾಪಗಳ ನಿರ್ವಹಣೆಗಾಗಿ ಅಂಥ ಕಾರ್ಯವಿಧಾನದ ನಿಯಮಗಳನ್ನು ಅದರ ಸಭೆಗಳಲ್ಲಿ ಪಾಲಿಸತಕ್ಕದ್ದು:

ಪರಂತು, ಮಂಡಳಿಯು ಒಂದುವರ್ಷದಲ್ಲಿ ಕನಿಷ್ಠ ನಾಲ್ಕು ಬಾರಿ ಸಭೆ ಸೇರತಕ್ಕದ್ದು:

ಮತ್ತು ಪರಂತು, ಅಧ್ಯಕ್ಷನು ಮಂಡಳಿಯ ಹೆಚ್ಚುವರಿ ಸಭೆಯನ್ನು ಕರೆಯಬಹುದು.

(2) ಅಧ್ಯಕ್ಷನು ಅಥವಾ ಯಾವುದೇ ಕಾರಣಕ್ಕಾಗಿ ಮಂಡಳಿಯ ಯಾವುದೇ ಸಭೆಯಲ್ಲಿ ಆತನಿಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ, ಆತನಿಂದ ಅಧಿಕೃತಗೊಳಿಸಿದ ಯಾರೇ ಇತರ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಮಂಡಳಿಯ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ಪ್ರಶ್ನೆಗಳನ್ನು ಹಾಜರಿರುವ ಮತ್ತು ಮತದಾನ ಮಾಡುವ ಸದಸ್ಯರ ಬಹುಮತದ ಮೂಲಕ ನಿರ್ಧರಿಸತಕ್ಕದ್ದು ಹಾಗೂ ಸಮಾನ ಮತಗಳು ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಆತನ ಗೈರು ಹಾಜರಿಯಲ್ಲಿ ಅಧ್ಯಕ್ಷತೆ ವಹಿಸಿರುವ ಸದಸ್ಯನು ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

(4) ಮಂಡಳಿಯ ಒಟ್ಟು ಸದಸ್ಯರ ಶೇಕಡ ಐವತ್ತರಷ್ಟು ಸಭೆಯ ಕೋರಂ ಆಗಿರತಕ್ಕದ್ದು.

**5. ಮಂಡಳಿಯ ಪ್ರಕಾರ್ಯಗಳು.-**ಮಂಡಳಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:-

(ಎ) 7ನೇ ಪ್ರಕರಣದ ಅನುಸಾರ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ನೋಂದಣಿಯನ್ನು ಖಚಿತಪಡಿಸಿಕೊಳ್ಳುವುದು;

(ಬಿ) ಈ ಅಧಿನಿಯಮದ ಉಪಬಂಧಗಳ ಪಾಲನೆಯನ್ನು ಪುನರಾವಲೋಕಿಸಲು ಮೇಲ್ವಿಚಾರಣಾ ಕಾರ್ಯ ವ್ಯವಸ್ಥೆಯನ್ನು ರಚಿಸುವುದು ಮತ್ತು ಕ್ಷೇಮಾಭಿವೃದ್ಧಿ ಉಪಕರವನ್ನು ಯುಕ್ತವಾಗಿ ಸಂಗ್ರಹಿಸಲಾಗುತ್ತಿದೆ ಎಂಬುದನ್ನು ಪ್ರಮಾಣೀಕರಿಸುವುದು;

(ಸಿ) ನೋಂದಾಯಿತ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವುದು ಮತ್ತು ಅಧಿಸೂಚಿಸುವುದು ಹಾಗೂ ಅಂಥ ಯೋಜನೆಗಳನ್ನು ನಿರ್ವಹಿಸುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳುವುದು;

(ಡಿ) ಮಂಡಳಿಯು ರೂಪಿಸಿದ ಯೋಜನೆಗಳ ಅನುಸಾರ ಕಾರ್ಮಿಕರು ಪ್ರಯೋಜನಗಳನ್ನು ಪಡೆಯುತ್ತಿರುವರೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಸಂಬಂಧಿತ ಉದ್ಯೋಗದಾತರೊಂದಿಗೆ ಕಾರ್ಮಿಕರು ತೊಡಗಿಕೊಳ್ಳುವಲ್ಲಿ ಅವರಿಗೆ ಅನುಕೂಲಕರ ಸೌಕರ್ಯಗಳನ್ನು ಕಲ್ಪಿಸುವುದು;

(ಇ) 10ನೇ ಪ್ರಕರಣದ ಅಡಿಯಲ್ಲಿ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಹಕ್ಕುಗಳನ್ನು ಸಂರಕ್ಷಿಸಲಾಗುತ್ತಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು;

(ಎಫ್) ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರೊಂದಿಗೆ ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಒಕ್ಕೂಟಗಳ ಜೊತೆಗೆ ತೊಡಗಿಕೊಳ್ಳುವುದು ಹಾಗೂ ಅವರೊಂದಿಗೆ ನಿರಂತರ ಮುಕ್ತ ಸಮಾಲೋಚನೆಗಳನ್ನು ನಡೆಸುವುದು;

(ಜಿ) ಯಾವುದೇ ಕಾನೂನು ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳ ಅಥವಾ ಯಾವುದೇ ಅಂಥ ಕಾನೂನಿನ ಅಡಿಯಲ್ಲಿ ಮಾಡಿದ ಐತೀರ್ಪು ಅಥವಾ ಒಪ್ಪಂದದ

ಮೇರೆಗೆ ಯಾವುದೇ ಕ್ಲೇಮ್ ಅನ್ನು ಮಾಡುವುದಕ್ಕಾಗಿ ಕ್ರಮವನ್ನು ಕೈಗೊಳ್ಳಲು ಯಾರೇ ನೋಂದಾಯಿತ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಪರವಾಗಿ ಹೋರಾಡಲು ಸಕ್ಷಮವಾಗಿರುವ ವ್ಯಕ್ತಿಗಳು ಅಥವಾ ಅಧಿಕಾರಿಗಳನ್ನು ನಾಮನಿರ್ದೇಶಿಸುವುದು ಹಾಗೂ ಅಂಥ ವ್ಯವಹರಣೆಗಳಲ್ಲಿ ನೋಂದಾಯಿತ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಪರವಾಗಿ ಹಾಜರಾಗುವುದು;

(ಎಚ್) ಸಲಹೆಗಳು, ಸಮಾಲೋಚನೆ ಅಥವಾ ಅಗತ್ಯವಿರಬಹುದಾದ ಯಾವುದೇ ಅಂಥ ಅಭಿಪ್ರಾಯ ಪಡೆಯುವುದಕ್ಕಾಗಿ ವಿಶೇಷ ಆಹ್ವಾನಿತರನ್ನು ಕರೆಯುವುದು;

(ಐ) ಈ ಅಧಿನಿಯಮದಡಿಯಲ್ಲಿ ನೋಂದಾಯಿಸಿದ ಎಲ್ಲಾ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಪ್ರಯೋಜನಕ್ಕಾಗಿ ಸಾಮಾನ್ಯ ಯೋಜನೆಗಳನ್ನು ರೂಪಿಸುವುದು; ಮತ್ತು

(ಜೆ) ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರಿಗಾಗಿ ಪ್ರಾಪ್ತವಾದ ಎಲ್ಲಾ ಆರ್ಥಿಕ ಪ್ರಯೋಜನಗಳನ್ನು ನೇರ ನಗದು ವರ್ಗಾವಣೆ (DBT) ಮೂಲಕ ವರ್ಗಾಯಿಸುವುದು.

**6. ಮಂಡಳಿಯ ಅಧಿಕಾರಿಗಳು ಮತ್ತು ನೌಕರರು.-**ಈ ಅಧಿನಿಯಮದ ಅಡಿಯಲ್ಲಿನ ಅದರಪ್ರಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ನೌಕರರು ಈ ಮಂಡಳಿಯ ಅಧಿಕಾರಿಗಳು ಮತ್ತು ನೌಕರರೆಂದು ಪರಿಗಣಿಸುವುದು.

**7. ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ನೋಂದಣಿ.-** (1) ಸಿನಿ ಮತ್ತು ಸಾಂಸ್ಕೃತಿಕ ಎಲ್ಲಾಕಾರ್ಯಕರ್ತರುಮಂಡಳಿಯಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು.

(2) ಮಂಡಳಿಯು ರಾಜ್ಯದಲ್ಲಿನ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ದತ್ತಾಂಶವನ್ನು ಅವರ ಉದ್ಯೋಗ ವಿವರಗಳೊಂದಿಗೆ ನಿರ್ವಹಿಸತಕ್ಕದ್ದು.

(3) ಮಂಡಳಿಯು ನೋಂದಾಯಿಸಿಕೊಂಡ ಪ್ರತಿಯೊಬ್ಬ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತನಿಗೆ ಒಂದು ವಿಶಿಷ್ಟ ಗುರುತನ್ನು ಸೃಜಿಸತಕ್ಕದ್ದು.

(4) ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ನೋಂದಣಿಯು ಮೂರು ವರ್ಷಗಳ ಅವಧಿಗಾಗಿ ಸಿಂಧುವಾಗಿರತಕ್ಕದ್ದು ಮತ್ತು ಅದನ್ನು ಅದು ಮುಕ್ತಾಯಗೊಂಡ ದಿನಾಂಕದಿಂದ ಮೂರು ತಿಂಗಳೊಳಗಾಗಿ ನವೀಕರಿಸತಕ್ಕದ್ದು.

(5) ಈ ಅಧಿನಿಯಮದಲ್ಲಿ ಪರಿಭಾಷಿಸಲಾದಂತೆ ಒಂದಕ್ಕಿಂತ ಹೆಚ್ಚಿನ ಸಾಂಸ್ಕೃತಿಕ ಚಟುವಟಿಕೆಯಲ್ಲಿ ನಿರತನಾದ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತನು ಯಾವುದೇ ಒಂದು ಅಕಾಡೆಮಿಯನ್ನು ಅಥವಾ ಸರ್ಕಾರವು ಮಂಡಳಿಯಲ್ಲಿನ ಸದಸ್ಯತ್ವಕ್ಕಾಗಿ ಅನುಮೋದಿಸಿದ ಅಂಥ ಇತರ ನಿಕಾಯವನ್ನು ಅಥವಾ ಸಂಘವನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು ಹಾಗೂ ಒಂದು ಬಾರಿ ಮಾಡಿಕೊಂಡ ಅಂಥಆಯ್ಕೆಯು ಅಂತಿಮವಾಗಿರತಕ್ಕದ್ದು.

**8. ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರಿಗಾಗಿ ನಿಧಿ.-** (1) ಸರ್ಕಾರವು, ನೋಂದಾಯಿತ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಪ್ರಯೋಜನಕ್ಕಾಗಿ "ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ನಿಧಿ" ಎಂದು ಕರೆಯಲಾಗುವ ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು,-

(i) ಈ ಅಧಿನಿಯಮದ 9ನೇ ಪ್ರಕರಣದಡಿ ವಿಧಿಸಲಾದ ಕ್ಷೇಮಾಭಿವೃದ್ಧಿ ಉಪಕರದಿಂದಸ್ವೀಕರಿಸಲಾದ ಎಲ್ಲಾ ಮೊತ್ತಗಳು;

(ii) ನೋಂದಾಯಿತ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರು ನೀಡಿದ ಎಲ್ಲಾ ವಂತಿಗೆಗಳು;

(iii) ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳಿಂದಸಹಾಯಾನುದಾನದ ರೂಪದಲ್ಲಿ ಸ್ವೀಕರಿಸಿದ ಎಲ್ಲಾ ಮೊತ್ತಗಳು;

(iv) ಯಾವುವೇ ಸರ್ಕಾರೇತರ ಸಂಘ-ಸಂಸ್ಥೆಗಳು ಅಥವಾ ವ್ಯಕ್ತಿಗಳಿಂದ ಸ್ವೀಕರಿಸಿದ ಅನುದಾನಗಳು, ಕೊಡುಗೆಗಳು, ದೇಣಿಗೆಗಳು, ದಾನಗಳು, ಉಯಿಲುಗಳು ಅಥವಾ ವರ್ಗಾವಣೆಗಳ ರೂಪದಲ್ಲಿ ಸ್ವೀಕರಿಸಿದ ಎಲ್ಲಾ ಮೊತ್ತಗಳು;

(v) ಮಂಡಳಿಯು ಮಾಡಿದ ಯಾವುದೇ ಹೂಡಿಕೆ ಅಥವಾ ಷೇರುಗಳ ಮೇಲಿನ ಲಾಭ, ಬಡ್ಡಿ, ಲಾಭಾಂಶ;

(vi) ನಿಯಮಿಸಬಹುದಾದಂತೆ ಯಾವುದೇ ಇತರ ಮೂಲಗಳಿಂದ ಸ್ವೀಕರಿಸಿದ ಎಲ್ಲಾ ಮೊತ್ತಗಳು;

- ಅದರ ಭಾಗವಾಗಿರತಕ್ಕದ್ದು ಮತ್ತು ಅದಕ್ಕೆ ಸಂದಾಯ ಮಾಡತಕ್ಕದ್ದು.

(2) ನಿಯಮಿಸಬಹುದಾದಂಥ ವಿಧಾನದಲ್ಲಿ ಮಂಡಳಿಯು ನಿಧಿಯನ್ನು ಬಳಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

**9. ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕ್ಷೇಮಾಭಿವೃದ್ಧಿ ಉಪಕರ.-** (1) ರಾಜ್ಯದಲ್ಲಿ ಸರ್ಕಾರವು ಅಧಿಸೂಚಿಸಿದಂಥ, ಸಿನಿಮಾ ಟಿಕೇಟುಗಳು, ವಂತಿಗೆ ಶುಲ್ಕಗಳು ಮತ್ತು ಸಂಬಂಧಿತ ಸಂಸ್ಥೆಗಳಿಂದ ಸೃಜಿಸಲಾದ ಎಲ್ಲಾ ಆದಾಯದ ಮೇಲೆ "ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕ್ಷೇಮಾಭಿವೃದ್ಧಿ ಉಪಕರ" ವೆಂದು ಕರೆಯುವ ಕ್ಷೇಮಾಭಿವೃದ್ಧಿ ಉಪಕರವನ್ನು ವಿಧಿಸತಕ್ಕದ್ದು.

(2) ಉಪಪ್ರಕರಣ (1)ರಡಿ ವಿಧಿಸಿದ ಉಪಕರವು, ಸರ್ಕಾರವು ಅಧಿಸೂಚಿಸಬಹುದಾದಂಥ ದರದಲ್ಲಿರತಕ್ಕದ್ದು ಮತ್ತು ಸಿನಿಮಾ ಟಿಕೇಟುಗಳು, ವಂತಿಗೆ ಶುಲ್ಕಗಳು ಮತ್ತು ಸಂಬಂಧಿತ ಸಂಸ್ಥೆಗಳಿಂದ ಸೃಜಿಸಲಾದ ಎಲ್ಲಾ ಆದಾಯದ ಶೇಕಡಾ ಎರಡರಷ್ಟನ್ನು ಮೀರತಕ್ಕದ್ದಲ್ಲ, ಆದರೆ ಶೇಕಡಾ ಒಂದಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

(3) ಸರ್ಕಾರವು ಉಪಪ್ರಕರಣ (1)ರಡಿ ವಿಧಿಸಿದ ಉಪಕರದ ಉತ್ಪತ್ತಿಗಳನ್ನು ಸಂಗ್ರಹಿಸತಕ್ಕದ್ದು ಮತ್ತು ನಿಯಮಿಸಬಹುದಾದಂತೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಮಂಡಳಿಗೆ ಅಂಥ ಮೊತ್ತವನ್ನು ವರ್ಗಾಯಿಸತಕ್ಕದ್ದು.

(4) ರಾಜ್ಯ ಸರ್ಕಾರವು ಯೋಜನೆಯ ಅನುಷ್ಠಾನಕ್ಕಾಗಿ ಹಣದ ಅವಶ್ಯಕತೆಯನ್ನು ಗಮನದಲ್ಲಿರಿಸಿಕೊಂಡು ಮೂರು ವರ್ಷಗಳಿಗೊಮ್ಮೆ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಂತಿಗೆ ದರವನ್ನು ಅಧಿಸೂಚನೆಯ ಮೂಲಕ ಪರಿಷ್ಕರಿಸಬಹುದು.

**ವಿವರಣೆ:-** ಈ ಪ್ರಕರಣದ ಉದ್ದೇಶಗಳಿಗಾಗಿ, 'ಸಿನಿಮಾ ಟಿಕೇಟಿನ ದರ'ವು ಪಾವತಿಸಿದ ಅಥವಾ ಪಾವತಿಸಬಹುದಾದ ಯಾವುದೇ ತೆರಿಗೆಯನ್ನು ಒಳಗೊಂಡಿರತಕ್ಕದ್ದಲ್ಲ.

**10. ನೋಂದಾಯಿತ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಹಕ್ಕುಗಳು.-** ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರು,-

(ಎ) ಮಂಡಳಿಯಲ್ಲಿ ನೋಂದಾಯಿಸಿಕೊಳ್ಳಲು ಮತ್ತು ಎಲ್ಲಾ ವೇದಿಕೆಗಳಲ್ಲಿ ಅನ್ವಯವಾಗಬಹುದಾದ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಪಡೆಯುವ;

(ಬಿ) ಮಂಡಳಿಯು ಅಧಿಸೂಚಿಸಬಹುದಾದಂತೆ ವಂತಿಗೆ ಆಧಾರಿತ ಸಾಮಾನ್ಯ ಮತ್ತು ನಿರ್ದಿಷ್ಟ ಕ್ಷೇಮಾಭಿವೃದ್ಧಿ ಸಾಮಾಜಿಕ ಭದ್ರತಾ ಯೋಜನೆಗಳ ಪ್ರಯೋಜನವನ್ನು ಪಡೆಯುವ;

(ಸಿ) ಈ ಅಧಿನಿಯಮದಡಿ ನೋಂದಣಿ ಮತ್ತು ಕ್ಲೇಮುಗಳಿಗೆ ಸಂಬಂಧಿಸಿದ ಯಾವುದೇ ಕುಂದುಕೊರತೆಗಳನ್ನು ಹೇಳಿಕೊಳ್ಳುವ ಹಾಗೂ 12ನೇ ಪ್ರಕರಣದಡಿ ನಿರ್ದಿಷ್ಟಪಡಿಸಲಾದಂತೆ ಸೂಕ್ತ ಕುಂದುಕೊರತೆ ಪರಿಹಾರ ವ್ಯವಸ್ಥೆಯನ್ನು ಹೊಂದುವ; ಮತ್ತು

(ಡಿ) ಮಂಡಳಿಯಲ್ಲಿನ ಪ್ರಾತಿನಿಧ್ಯದ ಮೂಲಕ ಅವರ ಕ್ಷೇಮಾಭಿವೃದ್ಧಿಗಾಗಿ ತೆಗೆದುಕೊಳ್ಳುವ ಎಲ್ಲಾ ನಿರ್ಧಾರಗಳಲ್ಲಿ ಭಾಗಿಯಾಗುವ,

- ಹಕ್ಕುಗಳನ್ನು ಹೊಂದಿರತಕ್ಕದ್ದು:

ಪರಂತು, ಈ ಅಧಿನಿಯಮದಲ್ಲಿರುವುದು ಯಾವುದೂ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಡಿಯಲ್ಲಿ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರಿಗೆ ನೀಡಲಾದ ಯಾವುದೇ ಪ್ರಯೋಜನ ಅಥವಾ ರಕ್ಷಣೆಯ ಮೇಲೆ ಪರಿಣಾಮ ಬೀರತಕ್ಕದ್ದಲ್ಲ.

**11. ಉದ್ಯೋಗದಾತನ ಕರ್ತವ್ಯಗಳು.-** ಪ್ರತಿಯೊಬ್ಬ ಉದ್ಯೋಗದಾತನು,-

(ಎ) ಪ್ರತಿ ಕ್ಯಾಲೆಂಡರ್ ತಿಂಗಳು ಹತ್ತನೇ ದಿನಾಂಕದೊಳಗೆ 9ನೇ ಪ್ರಕರಣದ ಅನುಸಾರ ವಿಧಿಸಲಾದ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕ್ಷೇಮಾಭಿವೃದ್ಧಿ ಉಪಕರದ ಮೊತ್ತವನ್ನು ರೇವಣಿ ಮಾಡುವುದು; ಮತ್ತು

(ಬಿ) ಈ ಉದ್ದೇಶಕ್ಕಾಗಿ ವಿನ್ಯಾಸಗೊಳಿಸಿದ ಆನ್‌ಲೈನ್ ಅಥವಾ ವೆಬ್ ಪೋರ್ಟಲ್‌ನಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಅರ್ಧವಾರ್ಷಿಕವಾಗಿ ವಿವರ ಪಟ್ಟಿಕೆಯನ್ನು ಸಲ್ಲಿಸುವುದು, ನಿಯಮಿಸಬಹುದಾದಂತೆ ಎಲ್ಲಾ ಮಾಹಿತಿಯನ್ನು ಒಳಗೊಂಡ ಪ್ರತಿ ತಿಂಗಳ ಹತ್ತನೇ ದಿನಾಂಕದೊಳಗೆ ನಿಯಮಿಸಲಾದಂಥ ನಮೂನೆಯಲ್ಲಿ ಮಾಸಿಕ ವಿವರಪಟ್ಟಿಯನ್ನು ಸಲ್ಲಿಸುವುದು,

- ಅಗತ್ಯವಾಗಿರತಕ್ಕದ್ದು.

**12. ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕುಂದುಕೊರತೆ ಪರಿಹಾರ ವ್ಯವಸ್ಥೆ.-** (1)ಈ ಅಧಿನಿಯಮದಡಿಯಲ್ಲಿ ನೋಂದಣಿಗೊಂಡ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತನು ಈ ಅಧಿನಿಯಮದಡಿ ಉಪಬಂಧಿಸಲಾದ ಹಕ್ಕುಗಳು, ಪಾವತಿಗಳು ಮತ್ತು ಇತರೆ ಪ್ರಯೋಜನಗಳಿಗೆ ಸಂಬಂಧಿಸಿದಂತೆ ಉದ್ಭವಿಸುವ ಯಾವುದೇ ಕುಂದುಕೊರತೆ ಸಂಬಂಧದಲ್ಲಿ ಖುದ್ದಾಗಿ ಅಥವಾ ವೆಬ್ ಪೋರ್ಟಲ್ ಮೂಲಕ ಸರ್ಕಾರವು ಗೊತ್ತುಪಡಿಸಿದ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸಬಹುದು.

(2) ಉಪಪ್ರಕರಣ (1)ರಡಿ ಸಲ್ಲಿಸಿದ ಅರ್ಜಿಗಳ ವಿಲೇವಾರಿಗಾಗಿ ನಿಯಮಿಸಬಹುದಾದಂಥ ಕಾರ್ಯವಿಧಾನವು ಇರತಕ್ಕದ್ದು.

(3) ಉಪಪ್ರಕರಣ (1)ರಡಿ ಹಾಗೆ ಅಧಿಕೃತಗೊಳಿಸಿದ ಅಧಿಕಾರಿಯು ಅರ್ಜಿಯ ವಿಚಾರಣೆಯ ತರುವಾಯ ಯುಕ್ತ ಪರಿಹಾರದ ಪಾವತಿಗಾಗಿ ಪರಿಹಾರಾತ್ಮಕ ಆದೇಶವನ್ನು ಹೊರಡಿಸುವ ಅಥವಾ ಸಂದರ್ಭಾನುಸಾರ ಉದ್ಯೋಗದಾತನಿಗೆ ನಿರ್ದೇಶನವನ್ನು ನೀಡುವ ಮೂಲಕ ಸದರಿ ಅರ್ಜಿಯನ್ನು ವಿಲೇ ಮಾಡಬಹುದು.

(4) ಉಪಪ್ರಕರಣ (3)ರಡಿಯಲ್ಲಿನ ಆದೇಶದ ವಿರುದ್ಧ ಅಪೀಲನ್ನು ಆದೇಶದ ದಿನಾಂಕದಿಂದ ತೊಂಭತ್ತು ದಿನಗಳೊಳಗೆ ಅಪೀಲು ಪ್ರಾಧಿಕಾರದ ಮುಂದೆ ಅಪೀಲನ್ನು ಸಲ್ಲಿಸತಕ್ಕದ್ದು:

ಪರಂತು, ಅಪೀಲುದಾರನು ಅಪೀಲನ್ನು ಸಮಯದ ನಂತರಸಲ್ಲಿಸುವುದರಿಂದ ತಡೆಯಲು ನೀಡಿರುವ ಕಾರಣವು ಸಮಂಜಸವಾಗಿರುವುದೆಂದು ಅಪೀಲು ಪ್ರಾಧಿಕಾರಕ್ಕೆ ಮನವರಿಕೆಯಾದರೆ

ತೊಂಭತ್ತು ದಿನಗಳ ಸದರಿ ಅವಧಿಯ ಮುಕ್ತಾಯದ ತರುವಾಯವೂ ಅಪೀಲನ್ನು ಅಂಗೀಕರಿಸಬಹುದು.

(5) ಅಪೀಲು ಪ್ರಾಧಿಕಾರವು ನಿಯಮಿಸಬಹುದಾದ ಕಾರ್ಯವಿಧಾನದ ಅನುಸಾರ ಅಪೀಲನ್ನು ವಿಲೇವಾರಿ ಮಾಡತಕ್ಕದ್ದು.

**13. ಕ್ಷೇಮಾಭಿವೃದ್ಧಿ ಉಪಕರದ ವಸೂಲಾತಿ.-** ಉದ್ಯೋಗದಾತನಿಂದ ಈ ಅಧಿನಿಯಮದಡಿಯಲ್ಲಿ ಬಾಕಿಯಿರುವ ಕ್ಷೇಮಾಭಿವೃದ್ಧಿ ಉಪಕರದ ಯಾವುದೇ ಮೊತ್ತವನ್ನು, ಭೂಕಂದಾಯದ ಬಾಕಿಯಂತೆ ಆತನಿಂದ ವಸೂಲು ಮಾಡತಕ್ಕದ್ದು.

**14. ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ.-** (1) ಮಂಡಳಿಯು ಸರಿಯಾದ ಲೆಕ್ಕಪತ್ರಗಳು ಮತ್ತು ಇತರೆ ಸಂಬಂಧಿತದಾಖಲೆಗಳನ್ನುನಿರ್ವಹಿಸತಕ್ಕದ್ದುಹಾಗೂನಿಯಮಿಸಬಹುದಾದಂಥ ನಮೂನೆಯಲ್ಲಿ ಜಮಾ ಖರ್ಚುಪಟ್ಟಿಯನ್ನೊಳಗೊಂಡು ವಾರ್ಷಿಕ ಲೆಕ್ಕಪತ್ರಗಳವಿವರಪಟ್ಟಿಯನ್ನುಸಿದ್ಧಪಡಿಸತಕ್ಕದ್ದು.

(2) ಮಂಡಳಿಯ ಲೆಕ್ಕಪತ್ರಗಳನ್ನು ವಾರ್ಷಿಕವಾಗಿ ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ಇಲಾಖೆ ಅಥವಾ ಸರ್ಕಾರವು ಗೊತ್ತೊಪಡಿಸಬಹುದಾದಂಥ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಡಿ ದೃಢೀಕರಿಸಿದ ಅಥವಾ ಅರ್ಹನಾದ ಲೆಕ್ಕಪರಿಶೋಧಕನಿಂದ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.

(3) ಲೆಕ್ಕಪರಿಶೋಧನಾಧಿಕಾರಿ ಅಥವಾ ಲೆಕ್ಕಪರಿಶೋಧಕನು ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಮಂಡಳಿಯ ಎಲ್ಲಾ ಲೆಕ್ಕಪತ್ರಗಳು ಮತ್ತು ಇತರೆ ದಾಖಲೆಗಳನ್ನುಪರಿಶೀಲಿಸಲು ಅವಕಾಶ ಹೊಂದಿರತಕ್ಕದ್ದು;

(4) ಮಂಡಳಿಯು ನಿಯಮಿಸಬಹುದಾದಂತೆ ಲೆಕ್ಕಪರಿಶೋಧನೆಗಾಗಿನ ಅಂಥ ಶುಲ್ಕವನ್ನು ಅನುದಾನದಿಂದ ಪಾವತಿಸತಕ್ಕದ್ದು.

(5) ಮಂಡಳಿಯು ಲೆಕ್ಕಪರಿಶೋಧಕನಿಂದವರದಿಯನ್ನು ಸ್ವೀಕರಿಸಿದತರುವಾಯ, ಸಾಧ್ಯವಾದಷ್ಟು ಬೇಗನೆ, ಲೆಕ್ಕಪತ್ರಗಳ ವಾರ್ಷಿಕ ವಿವರಣೆಯ ಒಂದು ಪ್ರತಿಯನ್ನು ಲೆಕ್ಕಪರಿಶೋಧಕನವರದಿಯ ಒಂದು ಪ್ರತಿಯೊಂದಿಗೆ ಸರ್ಕಾರಕ್ಕೆ ಕಳುಹಿಸತಕ್ಕದ್ದು ಹಾಗೂ ನಿಯಮಿಸಬಹುದಾದಂಥ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರ ಪಟ್ಟಿಯನ್ನು ಪ್ರಕಟಿಸುವಂತೆ ಮಾಡತಕ್ಕದ್ದು.

(6) ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಧಿಕಾರಿಯವರದಿಯನ್ನು ಪರಿಶೀಲಿಸಿದತರುವಾಯ, ಮಂಡಳಿಗೆ ತಾನುಸೂಕ್ತವೆಂದು ಭಾವಿಸುವಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಮಂಡಳಿಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

**15. ವಾರ್ಷಿಕ ವರದಿ.-** (1)ಮಂಡಳಿಯು ಈ ಅಧಿನಿಯಮದಡಿ ವರ್ಷದ ಅವಧಿಯಲ್ಲಿನ ತನ್ನ ಚಟುವಟಿಕೆಗಳ ಪ್ರತಿ ವರ್ಷದ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ಸಮಯದಲ್ಲಿ ಮತ್ತು ನಮೂನೆಯಲ್ಲಿ ಅದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ರಾಜ್ಯ ಸರ್ಕಾರವು (1)ನೇ ಉಪಪ್ರಕರಣದಡಿಯ ವರದಿಯನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**16. ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ದಂಡ.-** (1) ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳನ್ನು ಪಾಲಿಸಲು

ವಿಫಲನಾಗುವ ಯಾರೇ ಉದ್ಯೋಗದಾತನು, ಮಂಡಳಿ ಅಥವಾ ಮಂಡಳಿಯ ಪರವಾಗಿ ಅಧಿಕೃತಗೊಳಿಸಿದ ಅಧಿಕಾರಿಗಳು ಆತನ ಮೇಲೆ ಮೊದಲ ಉಲ್ಲಂಘನೆಗಾಗಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯನ್ನು ಮತ್ತು ತರುವಾಯದ ಉಲ್ಲಂಘನೆಗಾಗಿ ಒಂದು ಲಕ್ಷ ರೂಪಾಯಿಗಳವರೆಗಿನ ಜುಲ್ಮಾನೆಯನ್ನು ವಿಧಿಸಬಹುದು.

(2) ಉಪಪ್ರಕರಣ(1)ರಡಿ ವಿಧಿಸಲಾದ ದಂಡವನ್ನು ಪಾವತಿಸದಿದ್ದ ಸಂದರ್ಭದಲ್ಲಿ ಭೂಕಂದಾಯದ ಬಾಕಿಯಂತೆ ಅದನ್ನು ವಸೂಲು ಮಾಡತಕ್ಕದ್ದು.

**17. ಅಪರಾಧಗಳ ಸಂಜ್ಞೇಯತೆ.-** (1) ಸರ್ಕಾರದ ಯುಕ್ತ ಪ್ರಾಧಿಕಾರದ ಮೂಲಕ ಅಥವಾ ಅದರಡಿಯಲ್ಲಿ ಮಾಡಲಾದ ದೂರನ್ನುಳಿದು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ದಂಡನೀಯ ಅಪರಾಧದ ಸಂಜ್ಞೇಯತೆಯನ್ನು ಯಾವುದೇ ನ್ಯಾಯಾಲಯವು ಕೈಗೊಳ್ಳತಕ್ಕದ್ದಲ್ಲ,

(2) ಮೆಟ್ರೋಪಾಲಿಟನ್ ನ್ಯಾಯಾಧೀಶ ಅಥವಾ ಪ್ರಥಮ ದರ್ಜೆ ನ್ಯಾಯಿಕ ನ್ಯಾಯಾಧೀಶನಿಗೆ ಕಡಿಮೆಯಲ್ಲದ ಯಾವುದೇ ನ್ಯಾಯಾಲಯವು ಈ ಅಧಿನಿಯಮದಡಿಯಲ್ಲಿನ ಯಾವುದೇ ದಂಡನೀಯ ಅಪರಾಧದ ಅಧಿವಿಚಾರಣೆಯನ್ನು ನಡೆಸತಕ್ಕದ್ದಲ್ಲ.

**18. ಅಪರಾಧಗಳ ರಾಜಿ.-** (1) ಈ ಅಧಿನಿಯಮದಡಿಯಲ್ಲಿನ ಯಾವುದೇ ದಂಡನೀಯ ಅಪರಾಧವನ್ನು ಅಭಿಯೋಜನೆಯನ್ನು ಪ್ರಾರಂಭಿಸುವ ಮೊದಲು ಅಥವಾ ತರುವಾಯ, ಈ ಕುರಿತು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಗಳು ಅಥವಾ ಪ್ರಾಧಿಕಾರಗಳ ಮೂಲಕ ಮತ್ತು ಅಂಥ ಮೊತ್ತಕ್ಕಾಗಿ ರಾಜಿಯನ್ನು ಮಾಡಿಕೊಳ್ಳಬಹುದು:

ಪರಂತು, ಅಂಥ ರಾಜಿ ಮೊತ್ತವನ್ನು ಈ ಅಧಿನಿಯಮದ 8ನೇ ಪ್ರಕರಣದಡಿ ಸ್ಥಾಪಿಸಲಾದ ನಿಧಿಗೆ ಜಮೆ ಮಾಡತಕ್ಕದ್ದು.

(2) ಉಪಪ್ರಕರಣ (1)ರಲ್ಲಿರುವುದಾವುದೂ, ಒಬ್ಬ ವ್ಯಕ್ತಿಯು ಎರಡನೇ ಬಾರಿ ಅಥವಾ ತರುವಾಯದ ದಿನಾಂಕದಿಂದ ಮೂರು ವರ್ಷದ ಅವಧಿಯೊಳಗಾಗಿ,-

(ಎ) ಮೊದಲೇ ರಾಜಿಮಾಡಿಕೊಂಡ ಅಂಥದ್ದೇ ಅಪರಾಧವನ್ನು ಎಸಗಿದರೆ;

(ಬಿ) ಮೊದಲೇ ಅಪರಾಧ ನಿರ್ಣಿತನಾದಂಥ ವ್ಯಕ್ತಿಯು ಅಂಥದ್ದೇ ಅಪರಾಧವನ್ನು ಎಸಗಿದರೆ,

-ನಂತರ ಎಸಗಲಾದ ಅಪರಾಧಕ್ಕೆ ಅನ್ವಯವಾಗತಕ್ಕದ್ದಲ್ಲ.

(3) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ಪ್ರತಿಯೊಬ್ಬ ಅಧಿಕಾರಿಯು, ರಾಜ್ಯ ಸರ್ಕಾರದ ನಿರ್ದೇಶನ, ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟು ಅಪರಾಧದ ರಾಜಿಗಾಗಿ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(4) ಅಪರಾಧದ ರಾಜಿಗಾಗಿನ ಪ್ರತಿಯೊಂದು ಅರ್ಜಿಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಸಲ್ಲಿಸತಕ್ಕದ್ದು.

(5) ಯಾವುದೇ ಅಭಿಯೋಜನೆಯನ್ನು ಪ್ರಾರಂಭಿಸುವ ಮೊದಲು ಯಾವುದೇ ಅಪರಾಧದ ರಾಜಿಯನ್ನು ಮಾಡಿಕೊಂಡರೆ, ಅಂಥ ಅಪರಾಧಕ್ಕೆ ಸಂಬಂಧಿಸಿದಂತೆ ಹಾಗೆ ಅಪರಾಧದ ರಾಜಿಯನ್ನು ಮಾಡಿಕೊಂಡ ಅಪರಾಧಿಯ ವಿರುದ್ಧ ಯಾವುದೇ ಅಭಿಯೋಜನೆಯನ್ನು ಪ್ರಾರಂಭಿಸತಕ್ಕದ್ದಲ್ಲ.

**19. ಈ ಅಧಿನಿಯಮವು ಯಾವುದೇ ಇತರ ಕಾನೂನಿಗೆ ಜೊತೆಯಾಗಿರುವುದು.-** ಈ ಅಧಿನಿಯಮದ ಉಪಬಂಧಗಳುತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಜೊತೆಗೆ ಇರತಕ್ಕದ್ದೇ ಹೊರತು ಅದನ್ನು ಅಲ್ಪೀಕರಿಸತಕ್ಕದ್ದಲ್ಲ.

**20. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಸರ್ಕಾರ ಅಥವಾ ಯಾರೇ ಅಧಿಕಾರಿ ಅಥವಾ ಸಿಬ್ಬಂದಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**21. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು ಪೂರ್ವಪ್ರಕಟಣೆಯ ಷರತ್ತಿಗೊಳಪಟ್ಟು ನಿಯಮಗಳನ್ನು ರಚಿಸಬಹುದು ಎಂದರೆ:-

(2) ವಿಶೇಷವಾಗಿ ಮತ್ತು ಈ ಹಿಂದಿನ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ನಿಯಮಗಳ ಮೂಲಕ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ಈ ಅಧಿನಿಯಮದ ಯಾವುದೇ ಉಪಬಂಧದಡಿ ನಿಯಮಿಸಲಾಗಿರುವುದಾಗಿ ಅಗತ್ಯಪಡಿಸಿದ, ಅಥವಾ ಉಪಬಂಧಿಸಿದಂಥ ನಿಯಮಗಳನ್ನು ಉಪಬಂಧಿಸಬಹುದು.

(3) ಈ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯಕ್ಕೆ ಬಾಧಕವಾಗತಕ್ಕದ್ದಲ್ಲ.

**22. ವಿನಿಯಮಗಳ ರಚನಾಧಿಕಾರ**.- ಮಂಡಳಿಯು ರಾಜ್ಯ ಸರ್ಕಾರದ ಪೂರ್ವಾನುಮೋದನೆ ಪಡೆದು ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂತೆ ವಿನಿಯಮಗಳನ್ನು ರಚಿಸತಕ್ಕದ್ದುಮತ್ತು ಅಧಿನಿಯಮದಡಿ ವಿನಿಯಮಗಳಿಗಾಗಿ ಅದರ ಮೂಲಕ ಉಪಬಂಧಿಸುವುದನ್ನುಅಗತ್ಯಪಡಿಸಿ ಅದರಡಿ ಮಾಡಿದ ನಿಯಮಗಳ ವಿಷಯಗಳಿಗೆ ಸಂಬಂಧಿಸಿದಂತೆ ಅಧಿಸೂಚನೆಯ ಮೂಲಕ ರಚಿಸಬಹುದು.

**23. ತೊಂದರೆಯನ್ನು ನಿವಾರಿಸುವ ಅಧಿಕಾರ**.- (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಕಂಡುಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

**PARLIAMENTARY AFFAIRS AND LEGISLATION SECRETARIAT**
**NOTIFICATION**
**NO. DPAL 38 SHASANA 2024, BENGALURU, DATED: 24.09.2024**

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ಅಧಿನಿಯಮ, 2024 (2024ರ ಕರ್ನಾಟಕ ಅಧಿನಿಯಮ ಸಂಖ್ಯೆ: 46)ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

# KARNATAKA ACT NO. 46 OF 2024

(First Published in the Karnataka Gazette Extra-ordinary on the 24th day of September, 2024)

## THE KARNATAKA CINE AND CULTURAL ACTIVISTS (WELFARE) ACT, 2024

(Received the assent of the Governor on the 23rd day of September, 2024)

An Act to provide social security to Cine and Cultural Activists by constituting a Welfare Board and therebypromote their welfare in the State.

Whereas it is expedient to provide social security to Cine and Cultural Activists by constituting a Welfare Board and there by promote their welfare in the State and to provide for matters connected therewith or incidental thereto.

Be it enacted by the Karnataka State Legislature in the seventy fifth year of the Republic of India, as follows:-

**1. Short title and commencement.-**(1) This Act may be called the Karnataka Cine and Cultural Activists (Welfare) Act, 2024.

(2) It shall come into force on such date as the State Government may, by notification in the Official Gazette, appoint.

**2. Definitions.-**In this Act, unless the context otherwise requires,-

(a) "Academy" means the Karnataka Chalanachithra Academy, Karnataka Nataka Academy, Karnataka SangeethaNruthya Academy, Karnataka Janapada Academy, Karnataka Lalithakala Academy, Karnataka Yakshagana Academy and Karnataka Bayalata Academy established by the Government;

(b) “Appellate Authority” means the Member-Secretary of the Board;

(c) "Board" means the Karnataka Cine and Cultural Activists' Welfare Board constituted under section 3;

(d) "Contribution" means the amount payable to the Fund under section 8 of this Act;

(e) "Cine and Cultural activist" means any person who is employed in relation to the field of cinema to work as an artist (including actor, musician or dancer) or to do any work, skilled, unskilled, manual supervisory, technical, artistic or otherwise or any person who is being engaged in such other activities as declared by the Government, by notification in the official Gazette, for the purpose of this Act;

(f) "Cine and Cultural activity" means an activity performed by a Cine and Cultural activist and recognized as such by the respective Academy or

Organisations or such other Body or Association approved by the Government for the purposes of this Act, in which the activist is a member;

(g) "Cess" means cess levied and collected under section 9;

(h) "family" means wife or husband, minor sons and unmarried daughters of a cine and cultural activist and includes in it his father, mother and mentally retarded or physically challenged or widowed daughters who are solely dependent upon him;

(i) "Fund" means the Karnataka Cine and Cultural Activists' Welfare Fund constituted under section 8;

(j) "Government" means the Government of Karnataka;

(k) "Notification" means a notification published in the Official Gazette of Karnataka;

(l) "Prescribed" means prescribed by rules under this Act;

(m) "Registered Workers"means the workers registered under sub-section (1) of section 7 of this Act;

(n) "Regulations" means the regulations made by the Board under thisAct;

(o) "Related establishment" means stand alone cinema theaters, Multiplex halls, over-the-top (OTT), Television channels and such other establishments as notified by the Government from time to time;

(p) "Rules" means the rules made under this Act;

(q) "Scheme" means the Karnataka Cine and Cultural Activists' Welfare Fund Scheme framed under clause (c) of section 5; and

(r) "Unique ID" means the unique identification number issued toCine and Cultural Activists registered under section 7.

**3. Constitution of the Board.-**(1) The State Government shall, constitute a Board to be known as the Karnataka Cine and Cultural Activists' Welfare Board, it shall come into force from such date as the Government may, by Notification, to exercise the powers conferred on and perform the functions assigned to it, under this Act.

(2) The head quarter of the Board shall be at Bengaluru.

(3) The Board shall be a body corporate with the name aforesaid, having perpetual succession and a common seal, with power to acquire, hold and dispose of property, and to make contract, and shall by the said name, sue or be sued.

(4) The Board shall consist of the following members, namely;-

| | | |
|---|---|---|
| (a) | the Minister in-charge of the Department of Labour, Government of Karnataka | Ex-officio chairperson. |
| (b) | the Additional Chief Secretary/Principal Secretary/Secretary to Government, Department of Labour, Government of Karnataka. | Ex-officio vice-chairperson. |
| (c) | the Commissioner, Department of Labour | Ex-officio member secretary |
| (d) | Seventeen members to be nominated by the Government out of them,- | |

| | | |
|---|---|---|
| | (i) five members representing the workers engaged in Cine and Cultural Activity works of whom two shall be women.<br>(ii) seven members representing academies of Cine and Cultural Activity constituted by the Government. | Members<br><br>Members |
| | (iii) five members representing the State Government Departments out of whom the Additional Chief Secretary or Principal Secretary or Secretary or his nominee not below the rank of the Joint Secretary, Department of Kannada and Culture and Department of Information and Public Relation shall be the permanent members. | Ex-officio members |

Provided that, the Government shall ensure that the nominated members of the Board includes at least one-third women.

(5) The nominated members of the Board shall have a term of three years:

Provided that, the Government may extend their tenure for another one year if it deems appropriate.

(6) In the event of any vacancy occurring on account of death, resignation, disqualification or removal under sub-section (8), such vacancy shall be filled by the Government by a fresh nomination for the remaining term.

(7) Any nominated member of the Board may at any time resign from his office by writing under his hand addressed to the Chairperson, and his office shall, on acceptance of resignation, become vacant.

(8) No person shall be chosen as, or continue to be, a nominated member of the Board who,-

(i) is a salaried officer or an employee ofthe Board; or

(ii) is or at any time has been adjudged insolvent; or

(iii) is found to be a lunatic or becomes of unsound mind and stands so declared by a competent Court; or

(iv) is or has been convicted of any offence involving moralturpitude; or

(v) is absent without leave of the Board for more than three consecutive meetings of the Board.

(9) The nominated members of the Board shall be entitled for allowances for attending the meetings of the Board, at such rates as may be prescribed.

**4**. **Meeting of the Board.-** (1) The Board shall meet at such time and place and observe such rules of procedure for transaction of business at its meetings as may be prescribed:

Provided that, the Board shall meet at least four times in a year.

Provided further that, the Chairperson may convene additional meeting of the Board.

(2) The Chairperson, or, if for any reason he is unable to attend any meeting of the

Board, any other member authorised by him, shall preside over the meeting.

(3) All questions which come up before any meeting of the Board shall be decided by a majority of votes of the members present and voting, and in the event of equality of votes, the Chairperson, or in his absence, the person presiding, shall have a second or a casting vote.

(4) The Quorum for the meeting of the Board shall be fifty percent of the total members.

**5. Functions of the Board.-** The Board shall perform the following functions, namely:-

(a) ensure registration of Cine and Cultural Activists as per section 7;

(b) set up a monitoring mechanism to review compliance of provisions of this Act and to certify that welfare cess is being duly collected;

(c) formulate and notify Schemes for social security and welfare of registered Cine and Cultural Activists and take such measures as it may deem fit for administering such Schemes;

(d) ensure that workers have access to the benefits as per the Schemes formulated by the Board and to provide pro-active facilitation to workers in their engagement with concerned employer;

(e) ensure rights of Cine and Cultural Activists under section 10 are protected;

(f) engage with registered unions working with Cine and Cultural Activists and hold regular open consultations with them;

(g) nominate persons or officers who shall be competent to act on behalf of any registered Cine and Cultural Activists to initiate action for making any claim under any law or rules made there under or award or settlement made under any such law and appear on behalf of the registered Cine and Cultural Activists in such proceedings;

(h) call special invitees for suggestions, consultation or any such advice as the need may be;

(i) formulate general Schemes for benefit of all Cine and Cultural Activists registered under this Act; and

(j) transfer all monetary benefits accrued to the Cine and Cultural Activists through Direct Benefit Transfer (DBT).

**6. Officers and Employees of the Board.-**The officers and employees working with Karnataka State Unorganised Workers Social Security Board considers to be officers and employees of this Board for the efficient discharge of its functions under this Act.

**7. Registration of Cine and Cultural Activists.-** (1) All Cine and Cultural Activists shall be registered with the Board.

(2) The Board shall maintain a database of Cine and Cultural Activists in the State along with the details of their employment.

(3) The Board shall register and generate anunique ID to every Cine and Cultural Activist who is registered with the Board.

(4) The registration of Cine and Cultural Activists shall be valid for a period of three years and the same shall be renewed within three months from the date of its expiry.

(5) The Cine and Cultural Activist who is engaged in more than one cine and cultural activity as defined in this Act shall opt any one of the academy or such other body or association approved by the Government for membership in the Board and once such option is exercised it shall be final.

**8. Fund for Cine and Cultural Activists.-** (1) The Government shall establish a fund to be called "The Karnataka Cine and Cultural Activists Social Security and Welfare Fund" for the benefit of registered Cine and Cultural Activists and the following money shall form part of, and be paid into, namely:-

(i) All sums received from welfare cess levied under section 9;

(ii) All contributions made by registered Cine and Cultural Activists;

(iii) All sums received as grant-in-aid from the Government or the Central Government or Local authorities;

(iv) all sums received by way of grants, gifts, donations, benefactions, bequests or transfers from any NGO's, or Institutions or Individuals.;

(v) The Profit, interest, dividend on any investment or share made by the board; and

(vi) All sums received from any other sources as may be prescribed.

(2) The Fund shall be utilized and managed by the Board in such manner as may be prescribed.

**9. Cine and Cultural Activists Welfare Cess.-** (1) There shall be levied, a cess on the Cinema tickets, subscription fees and all revenue generated from the Related Establishments in the State, a welfare cess known as "the Cine and Cultural Activists Welfare Cess".

(2) The Cess levied under sub-section (1) shall be at such rates as may be notified by the Government, and it shall not exceed two percent but shall not be less than one percent on cinema tickets, subscription fees and all revenue generated from the Related Establishments.

(3) The proceeds of the cess levied under sub-section (1) shall be collected by the Government and be transferred to the Board within such period as may be prescribed.

(4) The Government may, by notification revise the rate of contribution specified in sub-sections (1) once in three years taking into account the amount needed for the implementation of the Scheme.

**Explanation.-** For the purposes of this section, 'the fare of cinema ticket' shall not include any tax paid or payable.

**10. Rights of registered Cine and Cultural Activists.-** A Cine and Cultural Activist shall have the right to,-

(a) be registered with the Board on being and be provided an Unique ID applicable across all platforms;

(b) have access to general and specific welfare and social security Schemes based on contribution made as may be notified by the Board;

(c) have an opportunity to be heard for any grievances regarding registration and claims under this Act and appropriate grievance redressal mechanism as specified in section 12; and

(d) participate in all decisions taken for their welfare through representation in the Board:

Provided that, nothing in this Act shall affect any benefit or protection accorded to Cine and Cultural Activists underany other law for the time being inforce.

**11. Duties of employer.-** Every employer shall be required to,-

(a) deposit the amount of Cine and Cultural Activists welfare cess levied as per section 9 by tenth day of each calendar month; and

(b) submit half yearly return in such form as may be prescribed**,** by tenth day of month including all information as may be prescribed, through online or web portal designed for this purpose.

**12. Grievance Redressal Mechanism for Cine and Cultural Activist.-** (1)A Cine and Cultural Activist registered under this Act may file a petition in person, before an officer, to be designated by the Government or make a petition through web portal, in relation to any grievance a rising out of entitlements, payments, and other benefits provided under this Act.

(2) The procedure, for the disposal of petition filed under sub-section (1), shall be such, as may be prescribed.

(3) The officer so authorized under sub-section (1),upon inquiries, dispose the said petition by passing an order of redressal and may also issue a direction to the employer, as the case may be, for payment of appropriate compensation.

(4) An appeal against the order under sub-section (3) shall lie within ninety days from the date of order before the Appellate Authority:

Provided that, the Appellate Authority may admit the appeal after the expiry of the said period of ninety days if it is satisfied that the appellant was prevented by sufficient cause from filing the appeal in time.

(5) The Appellate Authority shall dispose of the appeal in accordance with the procedure as may be prescribed.

**13. Recovery of welfare cess.-**Any amount of welfare cess due under this Act from an employer shall be recoverable in the same manner as an arrears of land revenue.

**14. Accounts and Audit.-** (1) The Board shall maintain proper accounts and other relevant records and prepare an annual statement of accounts, including a balance-sheet in such form as may be prescribed.

(2) The accounts of the Board shall be audited annually by the State Audit and Account Department or by such auditor certified or qualified under any law for the time being in force as the Government may appoint.

(3) The audit officer or auditor shall for the purpose of the audit have access to all the accounts and other records of the Board.

(4) The Board shall pay out of the grant such charges for the audit as may be prescribed.

(5) As soon as may be after the receipt of the report of the auditor, the Board shall send a copy of the annual statement of accounts, together with a copy of the report of the audit officer or auditor to the State Government and shall cause to be published the annual statement of accounts in such manner as may be prescribed.

(6) The State Government may, after perusal of the report of the audit officer or auditor, give such directions, as it thinks fit, to the Board and the Board shall comply with such directions.

**15. Annual Report.-** (1) The Board shall prepare every year a report of its activities under this Act during the year and submit the report to the State Government in such form and within such time as may be prescribed.

(2) The State Government shall, as soon as may be after the receipt ofreport under sub-section (1), cause the same to be laid before the House of theState Legislature.

**16. Penalties for contravention of provisions of this Act.-**(1) Any employer who contravenes the provisions of this Act or rules made there under or who fails to comply with the provisions of this Act or the rules made there under, the Board or the officers authorised by the Board in this behalf may, impose a penalty upon him which may extend up to ten thousand rupees for the first contravention and up to one lakh rupees for subsequent contravention.

(2) In case of non-payment of the penalty imposed under sub-section (1) the same shall be recoverable as an arrears of land revenue.

**17. Cognizance of Offences.-** (1) No court shall take cognizance of any offence punishable under this Act, save on a complaint made by or under the authority of the appropriate Government.

(2) No court inferior to that of a Metropolitan Magistrate or a Judicial Magistrate of the First Class shall try any offence punishable under this Act.

**18. Compounding of offences.-** (1) Any offence punishable under this Act may either before or after the institution of prosecution, be compounded by such officers or authorities and for such amount as the State Government may, by notification in the Gazette, specify in the behalf:

Provided that, such amount of composition shall be credited to the Fund established under section 8 of this Act.

(2) Nothing contained in sub-section (1) shall apply to an offence committed by a person for the second time or thereafter within a period of three years from the date-

(a) of commission of a similar offence which was earlier compounded;

(b) of commission of a similar offence for which such person was earlier convicted.

(3) Every officer referred to in sub-section (1) shall exercise the powers to compound an offence, subject to the direction, control and supervision of the State Government.

(4) Every application for the compounding of an offence shall be made in such manner as may be prescribed.

(5) Where any offence is compounded before the institution of any prosecution, no prosecution shall be instituted in relation to such offence, against the offender in relation to whom the offence is so compounded.

**19. Act to be in addition to any other law.-**The provisions of this Act shall be in addition to, and not in derogation of, any other law for the time being in force.

**20. Protection of action taken in good faith.-** No suit, prosecution orother legal proceeding shall lie against the Government or any officer or official for anything which is in good faith done or intended to be done in pursuance of this Act or any rule or order made there under.

**21. Power to make rules.-**(1) The State Government may, subject to the condition of previous publication, by notification make rules for carrying out the purposes of this Act.

(2) In particular and without prejudice to the generality of the foregoing powers, such rules may provide for all or any of the matters which under any provision of this Act are required to be prescribed, or to be provided for, by rules.

(3) Every rule made under this Act shall be laid, as soon as may be, after it is made, before each House of the State Legislature, while it is in session for a total period of thirty days which may be comprised in one session or in two or more successive sessions, and if, before the expiry of the session in which it is so laid or the session or sessions immediately following, both Houses agree in making any modification in the rule or both Houses agree that the rule should not be made, the rule shall thereafter have effect only in such modified form or be of no effect, as the case may be; so, however, that any such modification or annulment shall be without prejudice to the validity of anything previously done or omitted to be done under that rule.

**22. Power to make regulations.-** The Board shall with the previous approval of the State Government by notification make regulations not inconsistent with the

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



provisions of this Act and the rules made there under in respect of matters which are required to be provided for by regulations under the Act.

**23. Power to remove difficulty.-**(1) If any difficulty arises in giving effect to the provisions of this Act, the State Government may, by order published in the Official Gazette, make such provisions, not inconsistent with the provisions of this Act, as may appear to it to be necessary for removing the difficulty.

Provided that, no such order shall be made under this section after the expiry of a period of two years from the date of commencement of this Act.

(2) Every order made under sub-section (1), shall be laid, as soon as may be after it is made, before each house of the State Legislature.

The above translation of ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ಅಧಿನಿಯಮ, 2024 (2024ರ ಕರ್ನಾಟಕ ಅಧಿನಿಯಮ ಸಂಖ್ಯೆ: 46) into English language be published in the official Gazette under clause (3) of Article 348 of the Constitution of India.

**THAAWARCHAND GEHLOT**
**GOVERNOR OF KARANATAKA**

By Order and in the name of
the Governor of Karnataka,

**G.SRIDHAR**
Secretary to Government
Department of Parliamentary
Affairs and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH